**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 41/2020**

**ಚಾ.ಸಾ. :-2**
**ಪ್ರಾ.ಸಾ. :-3**

| | |
|---|---|
| ಹೆಸರು | : ಸುಲ್ತಾನ್ |
| ತಂದೆಯ ಹೆಸರು | : ಜಾಫರ್ |
| ವಯಸ್ಸು | : 36 ವರ್ಷ |
| ಉದ್ಯೋಗ | : ಚಾಲಕ |
| ವಾಸಸ್ಥಳ | : ಶ್ರೀರಂಗಪಟ್ಟಣ |

---

**ಪ್ರಮಾಣೀಕರಿಸಲಾದ ದಿನಾಂಕಃ- 03.11.2025**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ನಾನು ಆಟೋ ಚಾಲಕನಾಗಿ ರಾತ್ರಿಯ ಸಮಯದಲ್ಲಿ ಕರ್ತವ್ಯ ಮಾಡುತ್ತೇನೆ. ಸುಮಾರು 6 ವರ್ಷಗಳ ಹಿಂದೆ ನಾನು ಮತ್ತು ನನ್ನ ಗೆಳೆಯನಾದ ಅಜಯ್ ರವರು ಮಾತನಾಡಿಕೊಂಡು ಆಟೋ ನಿಲ್ದಾಣದ ಬಳಿ ನಿಂತಿದ್ದಾಗ ಮಧ್ಯರಾತ್ರಿ ಸುಮಾರು 2 ಗಂಟೆ ಸಮಯದಲ್ಲಿ ಜೋರಾದ ಶಬ್ದ ಕೇಳಿ ಬಂದಿರುತ್ತದೆ. ಶಬ್ದ ಬಂದ ನಂತರ ನಾವು ತಿರುಗಿ ನೋಡಿದ್ದು ಅಲ್ಲಿ ಅಪಘಾತವಾಗಿತ್ತು. ತಕ್ಷಣ ಆ ಜಾಗಕ್ಕೆ ಓಡಿ ಹೋಗಿರುತ್ತೇವೆ, ಕಾರು ಮತ್ತು ದ್ವಿಚಕ್ರ ವಾಹನದ ನಡುವೆ ಅಪಘಾತವಾಗಿರುತ್ತದೆ. ಕಾರಿನಲ್ಲಿ ಚಾಲಕ ಹಾಗೂ 4 ಜನ ಪ್ರಯಾಣಿಕರು ಇದ್ದರು. ಕಾರಿನವರಿಗೆ ಗಾಯಗಳಾಗಿರಲಿಲ್ಲ, ದ್ವಿಚಕ್ರ ವಾಹನವು ಕಾರಿನಿಂದ ಸುಮಾರು 20 ಅಡಿ ದೂರದಲ್ಲಿತ್ತು. ಕಾರಿನ ಚಾಲಕ ಅಪಘಾತವಾದಾಗ ಸ್ಟೇರಿಂಗ್ ತಿರುಗಿಸಿದ್ದು, ವಾಹನ ಆಟೋ ನಿಲ್ದಾಣದ ಬಳಿ ಬಂದಿತ್ತು. ನಂತರ ದ್ವಿಚಕ್ರ ವಾಹನದ ಚಾಲಕನನ್ನು ನೋಡಿದಾಗ ಆತ ಮೃತಪಟ್ಟಿದ್ದ. ನಾನು ಮತ್ತು

ನನ್ನ ಸ್ನೇಹಿತ ಆಟೋ ಮೂಲಕ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಆ ಸಮಯದಲ್ಲಿ ಮೃತನ ಸಂಬಂಧಿಕರು ಬಂದಿದ್ದರು. ವಾಹನಗಳ ನೋಂದಣಿ ಸಂಖ್ಯೆ ನೆನಪಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

**<u>ಪಾಟೀ ಸವಾಲು : ಮಾನ್ಯ ಸ.ಸ.ಅ.ರವರಿಂದ :</u>**

ಆ ದಿನ ನಾವು ಮಾತನಾಡಿಕೊಂಡು ಕುಳಿತಿದ್ದಾಗ ಕಾರು ವೇಗವಾಗಿ ಬಂದಿದ್ದನ್ನು ಹಾಗೂ ದ್ವಿಚಕ್ರ ವಾಹನಕ್ಕೆ ಗುದ್ದಿರುವುದನ್ನು ನೋಡಿರುತ್ತೇವೆ ಎಂದರೆ ಸುಳ್ಳು, ಸಾಕ್ಷಿಯು ಮುಂದುವರೆದು ಶಬ್ದ ಬಂದ ನಂತರದಲ್ಲಿ ನಾನು ನೋಡಿರುತ್ತೇನೆ ಎನ್ನುತ್ತಾರೆ. ಸಾಕ್ಷಿಯು ಪೊಲೀಸರ ಮುಂದೆ ನೀಡಿದ ಸಂಪೂರ್ಣ ಹೇಳಿಕೆಯನ್ನು ಸಾಕ್ಷಿಯವರಿಗೆ ಓದಿ ಹೇಳಲಾಗಿ ಸಾಕ್ಷಿಯು ಸದರಿ ಹೇಳಿಕೆಯನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದು ನಿರಾಕರಿಸಿದ ಮೇರೆಗೆ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ : ಇರುವುದಿಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**